ಉ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಜಯನಗರ 5ನೇ ಬ್ಲಾಕ್‌ನಲ್ಲಿರುವ ಗ್ರಂಥಾಲಯದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1508 (2197)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಜಯನಗರದ 5ನೇ ಬ್ಲಾಕ್‌ನಲ್ಲಿ ಸಾರ್ವಜನಿಕ ಗ್ರಂಥಾಲಯವಿರುವುದು ನಿಜವೇ?

ಆ ಹಾಗಿದ್ದಲ್ಲಿ ಈ ಗ್ರಂಥಾಲಯವನ್ನು ಮುಚ್ಚಲು ಯಾವುದೇ ಪ್ರಸ್ತಾವನೆ ಇದೆಯೇ

ಇ ಜಯನಗರ 5ನೇ ಬ್ಲಾಕ್ ಬಡಾವಣೆಯಲ್ಲಿ ಸಾರ್ವಜನಿಕ ಗ್ರಂಥಾಲಯ ಸೇವೆ ಕೊಡಲಾಗುತ್ತಿದೆಯೇ? ಹಾಗಿದ್ದಲ್ಲಿ ಸರ್ಕಾರವು ಈ ಗ್ರಂಥಾಲಯವನ್ನು ಮುಚ್ಚುವ ಪ್ರಸ್ತಾವನೆಯನ್ನು ಕೈ ಬಿಡುವುದೇ?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಹೌದು.

ಆ ಹಾಲಿ ಗ್ರಂಥಾಲಯವಿರುವ ಕಟ್ಟಡವನ್ನು ಕಟ್ಟಡದ ಮಾಲೀಕರು ಸ್ವಂತ ಉಪಯೋಗಕ್ಕೆ ಬಿಟ್ಟು ಕೊಡಲು ಕೋರಿಕೆ ಸಲ್ಲಿಸಿರುವುದರಿಂದ ಗ್ರಂಥಾಲಯವನ್ನು ಖಾಲಿ ಮಾಡಲಾಗಿದ್ದು ದಿನಾಂಕ :1-3-92 ರಿಂದ ಗ್ರಂಥಾಲಯ ಸೇವೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಆದಷ್ಟು ಬೇಗನೆ ಗ್ರಂಥಾಲಯ ಸೇವೆಯನ್ನು ಪುನ: ಪ್ರಾರಂಭಿಸಲಾಗುವುದು.

ವಿಷಯ:- ಕಾಳಿ ಹೈಡೆಲ್ ಪ್ರಾಜಿಕ್ಟ್ 2ನೇ ಹಂತದಲ್ಲಿ ನಿರಾಶ್ರಿತರಾದ ಕುಟುಂಬದವರಿಗೆ ಕೆ.ಪಿ.ಸಿ.ಯಲ್ಲಿ ನೇಮಕಾತಿ ಮಾಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1509 (1970)

ಶ್ರೀ ಆರ್.ವಿ.ದೇಶಪಾಂಡೆ (ಹಳಿಯಾಳ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಕಾಳಿ ಹೈಡಲ್ ಪ್ರಾಜೆಕ್ಟ್‌ನ 2ನೇ ಹಂತದಲ್ಲಿ ಜಲ ವಿದ್ಯುತ್ ಯೋಜನೆಗಳಿಂದ ಎಷ್ಟು ಕುಟುಂಬಗಳು ನಿರಾಶ್ರಿತವಾಗಿದೆ.

ಆ ಈ ಪೈಕಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ನಿರಾಶ್ರಿತರ ಕುಟುಂಬದವರಿಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ನೇಮಕಾತಿ ಮಾಡಲಾಗಿದೆ.

ಇ ಇತ್ತೀಚೆಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ನೇಮಕಾತಿಗಳನ್ನು ಮಾಡುವಾಗ ಜಲ ವಿದ್ಯುತ್ ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದವರಿಗೆ ಈ ನೇಮಕಾತಿಗಳನ್ನು ನೀಡುವಲ್ಲಿ ಅಲಕ್ಷ್ಯ ತೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಈ ಸರ್ಕಾರ ಇನ್ನು ಮುಂದೆ ನೇಮಕಾತಿಗಳನ್ನು ಮಾಡುವಾಗ ನಿರಾಶ್ರಿತರಾದ ಕುಟುಂಬಗಳ ಸದಸ್ಯರುಗಳಿಗೆ ಪ್ರಥಮ ಪ್ರಾಶಸ್ತ್ಯ ನೀಡುವುದು.

ಶ್ರೀ ಎಂ.ರಾಮಪ್ಪ, (ಇಂಧನ ರಾಜ್ಯ ಮಂತ್ರಿಗಳು.)-

ಅ 765

ಆ ಮೂರು (3)

ಇ ನಿಗಮದ ಪ್ರತಿ ನೇಮಕಾತಿಯಲ್ಲಿಯೂ ಸಂತ್ರಸ್ತ ಕುಟುಂಬದ ಅರ್ಹ ಸದಸ್ಯರಿಗೆ ಆದ್ಯತೆ ನೀಡಲಾಗುತ್ತಿದೆ.

ವಿಷಯ: ಕಾಳಿ ಕೈಗಾ ಪುನರ್‌ವಸತಿ ಸಮಿತಿಯನ್ನು ರಚಿಸುವ ಬಗ್ಗೆ